ಇನ್ನು ಕಳೆದ ಆರು ವರ್ಷದಿಂದ ಬೋರ್ಡ್ ಆಫ್ ವಿಸಿಟರ್ಸ್ ಕಮಿಟಿ ಆಲ್ಲಿ ಮಾಡಲಿಲ್ಲ. ಆರು ವರ್ಷಗಳಿಂದ ಆಲ್ಲಿ ಉಸ್ತುವಾರಿ ಸಮಿತಿಯನ್ನು ಕೂಡ ಮಾಡಲು ಸಾಧ್ಯವಾಗುತ್ತಿಲ್ಲ. ಅದನ್ನು ಮಾಡಿದರೆ ಸರ್ಕಾರದ ಮೇಲೆ ಆರ್ಥಿಕ ಹೊರೆ ಬೀಳುವುದಿಲ್ಲ. ಆದ್ದರಿಂದ ಬೋರ್ಡ್ ಆಫ್ ವಿಸಿಟರ್ಸ್ ಕಮಿಟಿಯನ್ನು ತಕ್ಷಣ ಮಾಡಬೇಕೆಂದು ತಾವು ಸರ್ಕಾರಕ್ಕೆ ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

+ಡಾ. ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಆಧ್ಯಕ್ಷರೆ, ನಾನು ಹೋದ ವಾರದಲ್ಲಿ ಮಾನ್ಯ ಶಾಸಕ ಮಿತ್ರರ ಜೊತೆ ಆ ಆಸ್ಪತ್ರೆ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಸ್ವಲ್ಪ ಅಡ್ಮಿನಿಸ್ಟ್ರೇಟಿವ್ ಹರ್ಡಲ್ಸ್ ಇದೆ. ಅಲ್ಲಿಯ ಆಸ್ಪತ್ರೆಗೆ ಬಜೆಟ್ ಕೊಡತಕ್ಕಂಥದ್ದು ಮೆಡಿಕಲ್ ಎಜುಕೇಶನ್‌ನಿಂದ, ಆದರೆ ಅಡ್ಮಿನಿಸ್ಟ್ರೇಶನ್ ಇರತಕ್ಕಂಥದ್ದು ಆರೋಗ್ಯ ಇಲಾಖೆಯಲ್ಲಿ. ನಮ್ಮ ಜಿಲ್ಲಾ ಸುಪರಿಂಟೆಂಡೆಂಟ್, ಪ್ರಾಂಶುಪಾಲರುಗಳು, ಕಾರ್ಯದರ್ಶಿಗಳು ಹಾಗೂ ನಾವು ಇಬ್ಬರು ಸಚಿವರು ಒಂದು ಸಭೆಯನ್ನು ನಾಳೆ ಕರೆದಿದ್ದೇವೆ. ಯಾರು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡು ಒಂದ ವಾರದೊಳಗೆ ಬಿರ್ಜುಮಾಡಲಿಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ.

ಆಧ್ಯಕ್ಷರು : ಸದಾನಂದಗೌಡರೆ, ತಾವು ಕೋರ್ಟ್ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲು ಸಮಯ ಕೇಳಿದ್ದೀರಿ, ಆದರ ಬಗ್ಗೆ ಮೇಡಮ್‌ರವರು ಕೂಡ ಪ್ರಸ್ತಾಪ ಮಾಡಲಿಚ್ಛಿಸಿದ್ದಾರೆ. ಇವರು ಬಾ ಹಿರಿಯ ನ್ಯಾಯವಾದಿಗಳು, ಬೆಂಗಳೂರಿಗೆ ಸಂಬಂಧಿಸಿದವರು, ಬೆಂಗಳೂರಿನಲ್ಲಿ ಗಲಾಟೆಯಾಗುತ್ತಿರ ಆದಕಾರಣ ಇಬ್ಬರದೂ ಒಂದೇ ವಿಚಾರ ಇರುವುದರಿಂದ ತಾವು ಸ್ವಲ್ಪ ಆವರಿಗಾಗಿ ಈಲ್ಡ್ ಆಗಿ.

(ಉ) ವಕೀಲರು ರೆಕಾರ್ಡ್ಸ್ ತೋರಿಸಿದಾಗ ಕೇಸ ಡೇಟ್ ಕೊಡಲಿಲ್ಲ ಎಂದ ರೂಲರ್ ತೆಗೆದುಕೊಂಡು ವಕೀಲರಿಗೆ ಹೊಡೆದಿರುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಆಧ್ಯಕ್ಷರೆ, ಸಣ್ಣ ಒಂದು ಕ್ಷುಲ್ಲಕ ವಿಷಯದಿಂದ ಇವೊ ಇಡೀ ಕರ್ನಾಟಕದಲ್ಲಿ ಯಾವುದೇ ಕೋರ್ಟು ನಡೆಯದೇ ಇರತಕ್ಕಂಥ ಪರಿಸ್ಥಿತಿ ಒದಗಿ ಬಂದಿದೆ. ಒ ವಕೀಲರು ರೆಕಾರ್ಡ್ಸ್ ತೋರಿಸಿದಾಗ ಕೇಸ್ ಡೇಟ್ ಕೊಡಲಿಲ್ಲ ಎಂದು ಹೇಳಿ ಒಬ್ಬ ಕ್ಲರ್ಕ್ ರೂಲರ್ ತೆಗೆದುಕೊಂಡು ವಕೀಲರಿಗೆ ಹೊಡೆದರು ಎಂದು ಕಂಪ್ಲೇಂಟ್ ಆಗಿದೆ. ಕಂಪ್ಲೇಂಟ್ ಆದ ನಂತ ಅಲ್ಲಿರತಕ್ಕಂಥ ಡಿಸ್ಟ್ರಿಕ್ಟ್ ಜಡ್ಜ್ ಆ ಕ್ಲರ್ಕ್‌ನ್ನು ಸಸ್ಪೆಂಡ್ ಮಾಡಿದರು. ಸಸ್ಪೆಂಡ್ ಆದ ನಂತ ವಕೀಲರೆಲ್ಲರು ಕೆಲಸ ಮಾಡುತ್ತಿದ್ದರು, ನೀವು ಸಸ್ಪೆಂಡ್ ಮಾಡಿದ್ದು ತಪ್ಪು ಎಂದು ಹೇಳಿ ಅಲ್ಲಿರತಕ್ಕಂ ಕ್ಲರ್ಕ್‌ಗಳು ಹೋದಾಗ ಆ ನ್ಯಾಯವಾದಿಗಳು ಆ ಸಸ್ಪೆನ್‌ಶನ್‌ನ್ನು ರದ್ದು ಪಡಿಸಿದರು. ಆ ರದ್ದುಪಡಿಸಿದ ನಂತರ ನಿನ್ನೆ ದಿವಸ ಇಡೀ ವಕೀಲವೃಂದ ಮತ್ತು ಕ್ಲರ್ಕ್‌ಗಳು ಕೋರ್ಟಿನಲ್ಲಿ ಕೆಲ ಮಾಡಲಿಲ್ಲ. ಒಂದು ಪ್ರೊಸೆಶನ್‌ನ್ನು ಹೈಕೋರ್ಟಿಗೆ ತೆಗೆದುಕೊಂಡು ಬಂದರು. ನ್ಯಾಯಮೂರ್ತಿಗಳು ಹೈಕೋರ್ಟಿನಲ್ಲಿ ಚೀಫ್ ಜಸ್ಟಿಸ್‌ಮತ್ತು ಇತರ ಜಡ್ಜ್‌ಗಳ ಮುಂದೆ ನಾನೂ ಕೂಡ ಹೋಗಿದ್ದೆ, ಹೋ ನಂತರ ಅದಕ್ಕೆ ಐದು ಜಡ್ಜಸ್ ಕಮಿಟಿ ಮಾಡಿ ಇದರ ತೀರ್ಮಾನ ಆ ಕಮಿಟಿ ತೆಗೆದುಕೊಳ್ಳುತ್ತದೆ ನೀ ನಿಮ್ಮ ನಿರ್ಣಯವನ್ನು ಹಿಂತೆಗೆದುಕೊಳ್ಳಿ ಎಂದು ಹೇಳಿದರು. ಈ ನಿರ್ಣಯ ಸಾಯಂಕಾಲ ಐ

ಗಂಟೆಗೆ ಆಯಿತು. ಎಲ್ಲಾ ಐದು ಜನ ನ್ಯಾಯ ಮೂರ್ತಿಗಳ ಸಮಕ್ಷದಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ. ಈ ವಕೀಲ ವೃಂದದ ಅಧ್ಯಕ್ಷರಾದ ಸನ್ಮಾನ್ಯ ಸುಬ್ಬಾರೆಡ್ಡಿಯವರು ಕೂಡ ವಾಪಸ್ಸು ಬಂದು ಜನರಲ್ ಬಾಡಿ ಮೀಟಿಂಗ್‌ನಲ್ಲಿ ಹೇಳಿ ಎಲ್ಲಾ ಸ್ಟ್ರೈಕ್ ವಾಪಸ್ಸು ತೆಗೆದುಕೊಂಡು ಕೆಲಸ ಮಾಡಬೇಕು ಎನ್ನತಕ್ಕಂಥ ಪರಿಸ್ಥಿತಿ ನಿರ್ಮಾಣ ಆದಂಥ ಸಂದರ್ಭದಲ್ಲಿ, ಹೈಕೋರ್ಟ್ ವಕೀಲರ ಅಸೋಸಿಯೇಶನ್ ಒಳಗೆ ನುಗ್ಗಿ ಹಲವರು ಆಸಿಡನ್ನು ತೆಗೆದುಕೊಂಡು ಹೋಗಿ ವಕೀಲರ ಮೇಲೆ ಎರಚಿದ್ದಾರೆ. ಹಾಕಿ ಸ್ಟಿಕ್, ಚೈನ್ ಮತ್ತು ಚಾಕುಗಳನ್ನು ಕೂಡ ತೆಗೆದುಕೊಂಡು ಹೋಗಿದ್ದರು ಎಂದು ಕೇಳಿದ್ದೇನೆ. ವಕೀಲರಿಗೆ ಹೊಡೆದಿದ್ದರಿಂದ ಐದು ಜನಗಳಿಗೆ ಏಟಾಗಿದೆ. ಒಬ್ಬ ವಕೀಲರ ಮೇಲೆ ಆಸಿಡ್ ಎರಚಿದ ಡಾ. ಸರ್ಟಿಫಿಕೇಟ್ ಕೂಡ ನನ್ನ ಹತ್ತಿರ ಇದೆ. ಆಲ್ಲಿದ್ದಂಥ ಚೇರ್ಸ್ ಎಲ್ಲಾ ಚಿಲ್ಲಾಪಿಲ್ಲಿಯಾಗಿದೆ. ಈ ಪರಿಸ್ಥಿತಿ ಉಂಟಾದ ಸಂದರ್ಭದಲ್ಲಿ ವಕೀಲರಾದ ಸುಬ್ಬಾರೆಡ್ಡಿಯವರಿಗೆ ಮತ್ತು ಯಾರು ಈ ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ಅವರನ್ನು ಜೀವದಲ್ಲಿ ಇರುವುದಕ್ಕೆ ಬಿಡುವುದಿಲ್ಲ ಎಂದು ಹೇಳಿ ಬೆದರಿಕೆಯನ್ನು ಹಾಕಿದ್ದಾರೆ. ಅಲ್ಲಿ ಪೋಲೀಸ್ ಕಮೀಷನರ್ ಬಂದರೂ ಕೂಡ ನಿರ್ಣಯ ಆಗಲಿಲ್ಲ. ಅವರು ನೋಡಿಕೊಳ್ಳುತ್ತೇನೆಂದು ಹೇಳಿ ಹೋದರು. ಆ ಪರಿಸ್ಥಿತಿ ಇವೊತ್ತು ಅಲ್ಲಿ ನಿರ್ಮಾಣವಾಗಿದೆ. ಯಾವುದೇ ಕೋರ್ಟಿನಲ್ಲೂ ಕೂಡ ಇವೊತ್ತು ಒಬ್ಬ ವಕೀಲರು ಹೋಗಲಿಲ್ಲ. ಬೆಳಿಗ್ಗೆ 11 ಗಂಟೆಯವರೆಗೆ ಯಾವುದೇ ಗೇಟಗಳು ಕೂಡ ತೆಗೆದಿರಲಲ್ಲ. ವಕೀಲರು ಒಬ್ಬರೂ ಕೂಡ ಒಳಗೆ ಹೋಗತಕ್ಕಂಥ ಪರಿಸ್ಥಿತಿ ಒದಗಿ ಬಂದಿರಲಿಲ್ಲ. ಆದರೂ ಸಹಿತ ವಕೀಲರು ನಮ್ಮ ಅಸೋಸಿಯೇಷನ್ ಒಳಗೆ ಹೋಗುವುದಕ್ಕೆ ಏಕೆ ಬಿಡುವುದಿಲ್ಲ ಎಂದು ಹೋಗಿದ್ದಾರೆ, ಈಗ ಅಲ್ಲಿ ನಮ್ಮ ಅಸೋಸಿಯೇಶನ್‌ನಲ್ಲಿ ಜನರಲ್ ಬಾಡಿ ಮೀಟಿಂಗ್ ನಡೆಯುತ್ತಿದೆ, ಎಲ್ಲಾ ವಕೀಲರು ಅಲ್ಲಿ ಸೇರಿದ್ದಾರೆ. ಯಾರದು ತಪ್ಪು, ಮತ್ತು ತಪ್ಪು ಯಾರು ಮಾಡಿದ್ದಾರೆಂದು ಮುಂದೆ ಅದನ್ನು ಯೋಚನೆ ಮಾಡಬಹುದು ಆದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುವುದಕ್ಕೆ ಮುಂಚೆ, ಪರಿಸ್ಥಿತಿ ಬಿಗಡಾಯಿಸುವುದಕ್ಕೆ ಮುಂಚೆ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಎರಡೂ ಅಸೋಸಿಯೇಶನ್‌ನವರನ್ನು ಕರೆಯಿಸಿ ಆ ಸಮಸ್ಯೆಯನ್ನು ಬಗೆಹರಿಸಬೇಕು. ಇವರು ಎನ್‌ಜಿಓನ್ ಅಧ್ಯಕ್ಷರಾದ ಸಿಪ್ಪೇಗೌಡರ ಮೇಲೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಇವೊತ್ತು ಎರಡೂ ಅಸೋಸಿಯೇಶನ್‌ನವರು ಒಂದೊಂದುಕಡೆ ಗುಂಪು ಸೇರಿದ್ದಾರೆ. ಇದು ನಮ್ಮ ಬಿಲ್ಡಿಂಗ್ ಎದರು ನಡೆದಂಥ ಪರಿಸ್ಥಿತಿ. ಸಾಯಂಕಾಲದ ವರೆಗೆ ಪರಿಸ್ಥಿತಿ ಏನಾಗುತ್ತದೆಂದು ಯಾರು ಹೇಳುವುದಕ್ಕೆ ಸಾಧ್ಯವಿಲ್ಲ. ನಾನು ಸಭೆಯ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲು ಇಲ್ಲಿಗೆ ಬಂದಿದ್ದೇನೆ. ಈ ಸಭೆಯಲ್ಲಿ ತಮ್ಮ ಮುಖಾಂತರ, ಮುಖ್ಯಮಂತ್ರಿಯವರಿಗೆ ತಿಳಿಸಿ, ನ್ಯಾಯ ಮೂರ್ತಿ ಅವರನ್ನು ಮತ್ತು ಸಂಘಟನೆ ಮಾಡಿದವರನ್ನು, ವಿಚಾರ ಮಾಡಿ, ಯಾರು ಇದರ ಬಗ್ಗೆ ಗಲಾಟೆ ಮಾಡುತ್ತಿದ್ದಾರೆ ಅವರನ್ನು ಕರೆಯಿಸಿ, ಅಡ್ವೋಕೇಟ್ ಅಸೋಸಿಯೇಶನ್ ಪ್ರೆಸಿಡೆಂಟ್ ಮತ್ತು ಈ ಎಸ್.ಜಿ.ಪಿ. ಅಸೋಸಿಯೇಶನ್ ಪ್ರೆಸಿಡೆಂಟ್ ಅವರನ್ನು ಕರೆಯಿಸಿ ಮಾತನಾಡಬೇಕು. ಇದರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶಿಸಿ ಸರಿಪಡಿಸಬೇಕು. ಏಕೆಂದರೆ ಬೇಲ್ ತೆಗೆದುಕೊಳ್ಳಬೇಕಾದ ಜನ ಬೀದಿಯಲ್ಲಿ ನಿಂತಿದ್ದಾರೆ. ಅನೇಕರು ಜೈಲಿನಲ್ಲಿದ್ದಾರೆಂದು ಕೆಲವು ಅಡ್ವೋಕೇಟ್‌ಗಳು ಬೇಲ್ ತೆಗೆದುಕೊಳ್ಳಬೇಕೆಂದು ಇದ್ದಾರೆ. ಕೋರ್ಟಿಗೆ ಹೋಗಬೇಕಾದ ಪರಿಸ್ಥಿತಿ

ಬಂದಲ್ಲಿ ಸಾರ್ವಜನಿಕರಿಗೆ, ವಕೀಲರಿಗೆ, ಎಲ್ಲರಿಗೂ ಕೂಡ ಅನಾನುಕೂಲ ಆಗತಕ್ಕಂಥ ಸಂದರ್ಭದಲ್ಲೂ ನಾನು ತಮ್ಮ ಮುಖಾಂತರ ಅವರಲ್ಲಿ ಈ ಕೆಲಸ ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ. ನಾನೂ ಕೂಡ 1988ರಲ್ಲಿ ಬಾರ್ ಕೌನ್ಸಿಲ್‌ನಲ್ಲಿ ಒಂದು ಸಾರಿ ಛೇರ್ಮನ್ ಆಗಿದ್ದೆ. ಆಗ ಇದೇ ಪರಿಸ್ಥಿತಿ ಅಲ್ಲಿ ಬಂದಿತ್ತು. ಒಂದು ವಾರಗಳ ಕಾಲ ಅಡ್ವೊಕೇಟ್‌ಗಳು ಯಾರು ಕೆಲಸ ಮಾಡಲಿಲ್ಲ. ಸನ್ಮಾನ್ಯ ನ್ಯಾಯ ಮೂರ್ತಿಗಳಾದ ಭೀಮಯ್ಯನವರು ಆಗಿದ್ದ ಕಾನೂನು ಮಂತ್ರಿಗಳನ್ನು ಕರೆಸಿ, ಇದರ ಬಗ್ಗೆ ಸಮಾಧಾನಕರವಾದ ಅಪಾಲಜಿ ಲೆಟರ್ ತೆಗೆದುಕೊಂಡು ಸಮಸ್ಯೆಯನ್ನು ಬಗೆಹರಿಸಿದರು. ಆ ಸಂದರ್ಭದಲ್ಲಿ ಪೋಲೀಸ್‌ನವರ ಮತ್ತು ವಕೀಲರ ನಡುವೆ ಭಿನ್ನಾಭಿಪ್ರಾಯ ಬಂದಿತ್ತು. ಆ ಸಂದರ್ಭದಲ್ಲಿ ಕೂಡ ಅವರು ಸಮಜಾಯಿಷಿ ಮಾಡಿದರು. ಅಂಥ ಪರಿಸ್ಥಿತಿ ಈಗ ಕೂಡ ಉದ್ಭವ ಆಗಬೇಕಾಗಿದೆ. ಅದಕ್ಕೋಸ್ಕರ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಭಿನ್ನವಿಸಿಕೊಳ್ಳುತ್ತೇನೆ. ಎಮರುಗಡೆ ಬಿಲ್ಡಿಂಗ್ ಒಡೆದು ಹಾಕುವಂಥ ಪರಿಸ್ಥಿತಿ ಇದೆ. ಆದ್ದರಿಂದ ಈ ದಿಸೆಯಲ್ಲಿ ಕೂಡಲೇ ತಾವು ಮಧ್ಯೆ ಪ್ರವೇಶಿಸಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ವಿ. ಸದಾನಂದ ಗೌಡ : ತುರ್ತಾಗಿ ಈ ಕೆಲಸ ಆಗಬೇಕಾಗಿದೆ. ಏಕೆಂದರೆ ಪರಿಸ್ಥಿತಿ ಖಂಡಿತವಾಗಿಯೂ ವಿಕೋಪಕ್ಕೆ ಹೋಗುತ್ತಿದೆ. ನಿನ್ನೆ ನಡೆದಂಥ ಗೂಂಡಾಗಿರಿ, ಆಸಿಡ್ ಎರಚುವಿಕೆ ಎಲ್ಲಾ ಮಾರಕ ಆಯುಧಗಳು ಇವೆಲ್ಲ ನೋಡಿದರೆ ಪುನಃ ಘಟನೆ ಸ್ಫೋಟ ಆಗುವಂತಹ ಸಂದರ್ಭ ಇದೆ. ತಕ್ಷಣ ಸರ್ಕಾರ ಮಧ್ಯೆ ಪ್ರವೇಶ ಮಾಡಿ ಇದನ್ನು ನಿಬಾಯಿಸಬೇಕೆಂದು ಹೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈಗ ನಡೆದಿರುವ ಘಟನೆಗಳು ಯಾರಿಗೂ ಮರ್ಯಾದೆ ತರುವಂಥದಲ್ಲ. ಆದ್ದರಿಂದ ಅದರೊಳಗೆ ಯಾರದ್ದು ತಪ್ಪು ಯಾರದ್ದು ಸರಿ ಎಂದು ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಅವರನ್ನೆಲ್ಲ ಕರೆಯಿಸಿ ಮಾತನಾಡಿ ಇದನ್ನು ಹೇಗೆ ಬಗೆಹರಿಸಬೇಕೆಂದು ಯೋಚನೆ ಮಾಡುತ್ತೇನೆ. ನಮ್ಮ ಕಾನೂನು ಮಂತ್ರಿಗಳಿಗೂ ಹೇಳುತ್ತೇನೆ.

(ಊ) ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮ್ಯಾಥ್ಯೂಸ ಸಾವು

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ ಕ್ಷೇತ್ರ) : ಸನ್ಮಾನ್ಯ ಸಭಾಧ್ಯಕ್ಷರೆ, ಸರ್ಕಾರ ಸಾರ್ವಜನಿಕರಿಗೆ ಅದರಲ್ಲೂ ಬಡವರಿಗೆ ಆಸ್ಪತ್ರೆಗಳನ್ನು ನಡೆಸುತ್ತಿದೆ. ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ ಒಂದು ಇದೆ. ಈ ವಿಕ್ಟೋರಿಯ ಆಸ್ಪತ್ರೆ ಇರುವುದು ಜೀವಗಳನ್ನು ಉಳಿಸುವುದಕ್ಕೋ ಅಥವಾ ಜೀವ ತೆಗೆಯುವುದಕ್ಕೋ ಎಂದು ಯಾರಿಗೂ ಕೂಡ ಗೊತ್ತಾಗುತ್ತಿಲ್ಲ. ದಿನಾಂಕ 21.12.96ರಂದು ಒಬ್ಬ ಕೇರಳದ ಕ್ರಿಶ್ಚಿಯನ್ ಯುವಕ ಮ್ಯಾಥ್ಯುಸ್ ಎಂಬುವವನು ಹುಮ್ನಾಬಾದ್‌ನಿಂದ ತನ್ನ ಊರಿಗೆ ಕ್ರಿಸ್‌ಮಸ್ ಆಚರಿಸಲು ಹೋಗಿತ್ತಿದ್ದಾಗ, ಮಲೇರಿಯ ಜ್ವರ ಬಂದು ವಿಕ್ಟೋರಿಯಾ ಆಸ್ಪತ್ರೆಗೆ ಹೋದ. ನಮ್ಮ ವಿಕ್ಟೋರಿಯ ಆಸ್ಪತ್ರೆ ಡಾಕ್ಟರಗಳು ಅವನಿಗೆ ಚಿಕಿತ್ಸೆ ಕೊಡುವುದು ಇರಲಿ ಅವನನ್ನು ನೋಡಲಿಕ್ಕೆ ಕೂಡ ನಿರಾಕರಿಸಿದರು. ಸಂಜೆ ಹೊತ್ತಿಗೆ ಬಹಳ ವಿಷಮವಾದಂಥ ಪರಿಸ್ಥಿತಿ ಉಂಟಾಯಿತು. ಆ